# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1277 (1393)** |
| ಸದಸ್ಯರ ಹೆಸರು | : | ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ವಿವರ</th></tr>
<tr><td>ಅ)</td><td>ಶಾಲಾ ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳಿಗೆ ಮಂಜೂರಾಗಿರುವ ಮುಖ್ಯ ಶಿಕ್ಷಕರ ಹುದ್ದೆಗಳೆಷ್ಟು; ಈ ಹುದ್ದೆಗಳನ್ನು ಯಾವ ಅರ್ಹತೆಯ ಆಧಾರದ ಮೇರೆಗೆ ಆಯ್ಕೆ ಮಾಡಿಕೊಳ್ಳಲಾಗುವುದು; (ಮಾಹಿತಿ ನೀಡುವುದು)</td><td>ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ:
<table>
<tr><th>ಕ್ರ. ಸಂ</th><th>ವಿಭಾಗ</th><th>ಮಂಜೂರಾದ ಹುದ್ದೆ</th></tr>
<tr><td>1.</td><td>ಬೆಂಗಳೂರು ವಿಭಾಗ</td><td>1432</td></tr>
<tr><td>2.</td><td>ಮೈಸೂರು ವಿಭಾಗ</td><td>1283</td></tr>
<tr><td>3.</td><td>ಧಾರವಾಡ ವಿಭಾಗ</td><td>1348</td></tr>
<tr><td>4.</td><td>ಕಲಬುರಗಿ ವಿಭಾಗ</td><td>1320</td></tr>
<tr><td></td><td>ಒಟ್ಟು</td><td>5383</td></tr>
</table>
ಸರ್ಕಾರದ ಆದೇಶ ಸಂಖ್ಯೆ: ಇಡಿ 51 ಡಿಜಿಒ 2005, ದಿನಾಂಕ: 30.10.2006 ರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಶೇಕಡಾ 75 ರಷ್ಟು ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರಿಗೆ ಬಡ್ತಿ ಮೂಲಕ, ಉಳಿದ ಶೇಕಡಾ 25 ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುತ್ತದೆ.</td></tr>
<tr><td>ಆ)</td><td>ಸದರಿ ಹುದ್ದೆಗೆ ಕೆ.ಇ.ಎಸ್. ಪರೀಕ್ಷೆ ನಡೆಸಿ ಇದರ ಮುಖಾಂತರ ಎಷ್ಟು ಮುಖ್ಯ ಶಿಕ್ಷಕರ ಹುದ್ದೆಗಳನ್ನು ಇಲ್ಲಿಯವರೆಗೆ ಭರ್ತಿ ಮಾಡಲಾಗಿದೆ; ಈ ಶಿಕ್ಷಣ ಇಲಾಖೆಯು ಕೆ.ಇ.ಎಸ್ ಪರೀಕ್ಷೆಯನ್ನು ಕೊನೆಯದಾಗಿ ಯಾವ ದಿನಾಂಕದಂದು ನಡೆಸಲಾಯಿತು; (ವಿವರ ನೀಡುವುದು);</td><td>ಕೆ.ಇ.ಎಸ್. ಪರೀಕ್ಷೆ ಮೂಲಕ ಮುಖ್ಯ ಶಿಕ್ಷಕರ ಹುದ್ದೆಗಳನ್ನು ನೇಮಕಾತಿ ಮಾಡಲಾಗಿರುವ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ</th><th>ವರ್ಷ</th><th>ನೇಮಕ ಮಾಡಲು ಅಧಿಸೂಚಿಸಲಾದ ಹುದ್ದೆಗಳ ಸಂಖ್ಯೆ</th></tr>
<tr><td>1.</td><td>1994</td><td>498</td></tr>
<tr><td>2.</td><td>ಏಪ್ರಿಲ್ 1999</td><td>937</td></tr>
<tr><td>3.</td><td>ನವೆಂಬರ್ 1999</td><td>234</td></tr>
<tr><td>4.</td><td>2010</td><td>558</td></tr>
<tr><td>5.</td><td>2012</td><td>629</td></tr>
</table></td></tr>
<tr><td>ಇ)</td><td>ಶಿಕ್ಷಣ ಇಲಾಖೆಯು ಕೆ.ಇ.ಎಸ್ ಪರೀಕ್ಷೆಯನ್ನು ಸಕಾಲಕ್ಕೆ ಸರಿಯಾದ ರೀತಿಯಲ್ಲಿ ನಡೆಸದೇ ಇರಲು ಕಾರಣವೇನು; ಕೆ.ಇ.ಎಸ್ ಪರೀಕ್ಷೆಯನ್ನು ನಡೆಸುವುದಾದರೆ ಯಾವ ಕಾಲಮಿತಿಯಲ್ಲಿ ನಡೆಸಲಾಗುವುದು? (ಮಾಹಿತಿ ನೀಡುವುದು)</td><td>ಶಾಲಾ ಶಿಕ್ಷಣ ಇಲಾಖೆಯಡಿ ಬರುವ 04 ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಇಲಾಖೆಯು ಈಗಾಗಲೇ ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಿರುತ್ತದೆ.<br><br>ಮುಂದುವರೆದು, ಧಾರವಾಡ ಮತ್ತು ಕಲಬುರಗಿ ವಿಭಾಗದಲ್ಲಿ ಪ್ರಸ್ತುತ ಹುದ್ದೆಗಳು ಖಾಲಿಯಿದ್ದು, ಅದರಲ್ಲಿ ಕಲಬುರಗಿ ವಿಭಾಗದಲ್ಲಿನ ಸ್ಥಳೀಯ ವೃಂದದ 146 ಮತ್ತು ಉಳಿಕೆ ಮೂಲ ವೃಂದದ 32 ಹುದ್ದೆಗಳನ್ನು ಒಳಗೊಂಡಂತೆ ಒಟ್ಟು 178 ಸರ್ಕಾರಿ</td></tr>
</table>

| | | |
|---|---|---|
| | | ಪ್ರೌಢ ಶಾಲಾ ಮುಖ್ಯಶಿಕ್ಷಕರು/ತತ್ಸಮಾನ ಗ್ರೂಪ್ 'ಬಿ' ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇಲಾಖೆಗೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಅಭಿಪ್ರಾಯಕ್ಕೆ ಸಲ್ಲಿಸಲಾಗಿ, ಆರ್ಥಿಕ ಇಲಾಖೆಯು ಕೆಲವು ಅಂಶಗಳ ಸ್ಪಷ್ಟೀಕರಣದೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ಕೋರಿರುವುದರಿಂದ, ಅದರನ್ವಯ ಇಲಾಖೆಯಲ್ಲಿ ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಇಪಿ 32 ಎಸ್‌ಒಹೆಚ್ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು